# ಮಣಿರತ್ನಂ

## ಸದಾ ಬ್ಯುಸಿ



**ಭಾ**ರತೀಯ ಚಿತ್ರರಂಗದಲ್ಲಿ ಮಣಿರತ್ನಂ ದೊಡ್ಡ ಹೆಸರು. ಅವರ ಕಮರ್ಷಿಯಲ್ ಚಿತ್ರಗಳ 'ಸಕ್ಸೆಸ್ ರೇಟ್' ಕೂಡಾ ದೊಡ್ಡದು. ಹಾಗೆಂದು ಅವರ ಚಿತ್ರಗಳನ್ನು ಕೇವಲ ಕಮರ್ಷಿಯಲ್ ಎಂದು ಉದಾಸೀನ ಮಾಡಲೂ ಆಗುವುದಿಲ್ಲ. ಸಿನಿಮಾವನ್ನು ಕಲೆ ಎಂದು ಭಾವಿಸುವ ಸೃಜನಶೀಲ ನಿರ್ದೇಶಕರೂ ಮಣಿರತ್ನಂರ ಕಲೆಗಾರಿಕೆಗೆ ತಲೆದೂಗುತ್ತಾರೆ.

'ರಾವಣ್' ಚಿತ್ರ ನಿರೀಕ್ಷಿಸಿದ ಯಶಸ್ಸು ಪಡೆಯದಿದ್ದಾಗಲೂ ವಿಮರ್ಶಕರು 'ಮಣಿರತ್ನಂ ಕಥೆ ಮುಗಿಯಿತು' ಎಂದು ಬರೆಯುವ ಧೈರ್ಯ ಮಾಡಲಿಲ್ಲ. ಯಾಕೆಂದರೆ ಮಣಿರತ್ನಂ ಅವರದ್ದು ಸದಾ ಹೊಸತನ್ನು ಬಯಸುವ ಪ್ರತಿಭೆ ಎನ್ನುವುದು ಸಾಬೀತಾಗಿರುವ ಸತ್ಯ. ಕೆಲಸದ ಒತ್ತಡದಿಂದ ಆರೋಗ್ಯದ ತೊಂದರೆ ಎದುರಿಸಿದರೂ ಸಿನಿಮಾ ಕುರಿತ ಮಣಿಯವರ ಮೋಹ ಕಡಿಮೆಯಾಗಿಲ್ಲ. ಅವರು ನಿರ್ದೇಶಿಸಲು ಹೊರಟ ಮಹತ್ವಾಕಾಂಕ್ಷೆಯ 'ಪೊನ್ನಿಯಿನ್ ಸೆಲ್ವನ್' ಚಿತ್ರಕ್ಕೆ ಬಜೆಟ್ ಅಡ್ಡಿಯಾಗಿದೆಯಂತೆ. ಹಾಗಾಗಿ ಸದ್ಯಕ್ಕೆ ಅದರ ಶೂಟಿಂಗ್ ಮುಂದಕ್ಕೆ ಹೋಗಿದೆ.

ಆದರೆ ತಮಿಳಿನ ಸೂಪರ್‌ಹೀರೊ ವಿಜಯ್ ಕಾಲ್‌ಶೀಟ್ ಪಡೆದಿರುವ ಮಣಿ, ಹೊಸ ಆ್ಯಕ್ಷನ್ ಸಿನಿಮಾವೊಂದನ್ನು ನಿರ್ದೇಶಿಸುತ್ತಿದ್ದಾರೆ. ಈ ಚಿತ್ರ ಅವರ ಹಿಂದಿನ 'ಅಗ್ನಿನಕ್ಷತ್ರಂ' ಮತ್ತು 'ದಳಪತಿ' ರೀತಿಯಲ್ಲಿ ಆ್ಯಕ್ಷನ್ ಸಿನಿಮಾ ಆಗಿರಲಿದೆಯಂತೆ. ಕೆಲವು ತಿಂಗಳಿಂದ ಸಿನಿಮಾ ಸೋಲಿನ ಸುಳಿಯಲ್ಲಿ ಸಿಲುಕಿರುವ ವಿಜಯ್ ಕೂಡಾ ಈ ಸಿನಿಮಾದ ಮೂಲಕ ಮತ್ತೆ ಮೇಲಕ್ಕೇಳುವ ನಿರೀಕ್ಷೆಯಲ್ಲಿ ಇದ್ದಾರಂತೆ.

ಹಾಗೆಯೇ ನಟ ಕಾರ್ತಿಕ್ ಮಗ ಗೌತಮ್‌ನ ಚೊಚ್ಚಲ ಸಿನಿಮಾವನ್ನೂ ಮಣಿ ನಿರ್ದೇಶಿಸಲು ಸಜ್ಜಾಗಿದ್ದಾರೆ. ಮಗನನ್ನು ಬೆಳ್ಳಿತೆರೆಗೆ ದೊಡ್ಡ ಮಟ್ಟದಲ್ಲಿ ಪರಿಚಯಿಸಲು ಕಾರ್ತಿಕ್‌ಗೆ ಮಣಿಗಿಂತ ಉತ್ತಮ ಹೆಸರು ದೊರಕಲಿಲ್ಲವಂತೆ. ಈ ಚಿತ್ರದ ಕಥೆಯೂ ಸಿದ್ಧವಾಗಿದ್ದು, ನಗರ ಕೇಂದ್ರಿತ ಪ್ರೇಮವೇ ಹೈಲೈಟ್ ಎನ್ನಲಾಗಿದೆ. ಚಿತ್ರದ ಬಹುತೇಕ ಶೂಟಿಂಗ್ ಲಂಡನ್ನಿನಲ್ಲಿ ನಡೆಯಲಿದ್ದು, ಉಳಿದ ಭಾಗ ಕಾಸ್ಮೊಪಾಲಿಟನ್ ನಗರಗಳಲ್ಲೇ ನಡೆಯಲಿದೆ ಎನ್ನುವುದು ಈಗಾಗಲೆ ಖಚಿತವಾಗಿದೆ. ಹಾಗಾಗಿ ಪೊನ್ನಿಯನ್.. ಚಿತ್ರ ಅರ್ಧಕ್ಕೆ ನಿಂತರೂ ಮಣಿ ಎಲ್ಲರಿಗಿಂತ ಬ್ಯುಸಿ ಎನ್ನುವುದಂತೂ ನಿಜ.

ಅಂದ ಹಾಗೆ ಗೌತಮ್ ಹೀರೊ ಆಗಿರುವ ಚಿತ್ರದಲ್ಲಿ ಮಣಿ ಜತೆಗೆ ಅವರ ಅಚ್ಚುಮೆಚ್ಚಿನ ಛಾಯಾಗ್ರಾಹಕ ಶ್ರೀರಾಮ್ ಮತ್ತು ಅಚ್ಚುಮೆಚ್ಚಿನ ಸಂಗೀತ ನಿರ್ದೇಶಕ ರೆಹಮಾನ್ ಇರುವುದೂ ಖಚಿತವಾಗಿದೆ. ಅಂದರೆ ಈ ತ್ರಿಮೂರ್ತಿ ಜೋಡಿ ಇನ್ನೊಂದು ಭಾರೀ ಮ್ಯಾಜಿಕ್ ಮಾಡುವ ನಿರೀಕ್ಷೆ ಅಭಿಮಾನಿಗಳದ್ದು.

1983ರಲ್ಲಿ 'ಪಲ್ಲವಿ ಅನುಪಲ್ಲವಿ' ಕನ್ನಡ ಸಿನಿಮಾದ ಮೂಲಕ ನಿರ್ದೇಶಕರಾದ ಮಣಿರತ್ನಂ 'ಮೌನರಾಗಂ' ಮೂಲಕ ಮೊದಲ ಬಾರಿಗೆ ದೊಡ್ಡ ಹೆಸರು ಮಾಡಿದರು. ಆ ಬಳಿಕ ಅವರ ಚಿತ್ರಗಳೆಲ್ಲವೂ ದೊಡ್ಡ ನಿರೀಕ್ಷೆ ಹುಟ್ಟಿಸಿದವುಗಳೇ. ನಿರೀಕ್ಷೆಗೆ ತಕ್ಕಂತೆ ಯಶಸ್ಸೂ ದೊರಕಿದೆ. 54ರ ಹರೆಯದಲ್ಲಿ ಈಗ ಹಿಂದೆ ತಿರುಗಿ ನೋಡಿದಾಗ ಮಣಿರತ್ನಂ ಕ್ರಮಿಸಿದ ದಾರಿ ಆಕರ್ಷಕವೂ ಹೌದು. ಮಧುರೈ ಸಂಜಾತ ಈ ಮ್ಯಾನೇಜ್‌ಮೆಂಟ್ ಪದವೀಧರ, ಬಾಲಿವುಡ್‌ನಲ್ಲೂ ದೊಡ್ಡ ಹೆಸರು ಮಾಡಿ, ಅಖಿಲ ಭಾರತೀಯ ಮಟ್ಟದಲ್ಲಿ ಅಭಿಮಾನಿಗಳನ್ನು ಹೊಂದಿದ್ದಾರೆ.

■ ಬಿಂದು